(ಗೊಂದಲ)

ಶ್ರೀ ಸಂಪಂಗಿ ಎನ್ : ಉತ್ತರ ಸಿಗದಿರುವುದಕ್ಕೆ ಕಾರಣ ಏನು?

ಶ್ರೀ ಖಾದರ್ ಯು.ಟಿ. 9 ತಿಂಗಳ ಹಿಂದೆ ಕೃಷ್ಣಯ್ಯಶೆಟ್ಟಿಯವರು ಇದ್ದಾಗ ಕೇಳಿರುವ ಪ್ರಶ್ನೆ. ಏಕೆ ಉತ್ತರವನ್ನು ಕೊಡಲಿಲ್ಲವೆನ್ನುವುದರ ಬಗ್ಗೆ ಕಾರಣವನ್ನಾದರೂ ಕೊಡಲಿ.

ಅಧ್ಯಕ್ಷರು : ಮುಂದಿನವಾರ ಉತ್ತರ ಕೊಡಿಸುತ್ತೇನೆ.

ಶ್ರೀ ಖಾದರ್ ಯು.ಟಿ. : ಏಕೆ ಉತ್ತರವನ್ನು ಕೊಡಲಿಲ್ಲವೆನ್ನುವುದರ ಬಗ್ಗೆ ಮುಂದಿನವಾರದಲ್ಲಿ ಉತ್ತರವನ್ನು ಕೊಡಲಿ.

ಶ್ರೀ ಎ.ಮಂಜು : ಒಂದು ವಾರದಲ್ಲಿ ಉತ್ತರ ಕೊಡುತ್ತೇನೆಂದು ಹೇಳಿದ್ದರು.

ಶ್ರೀ ಹೆಚ್.ಡಿ.ರೇವಣ್ಣ : 9 ತಿಂಗಳಾದರೂ ಉತ್ತರವಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಮಾನ್ಯ ಸುರೇಶ್ ಬಾಬುರವರು ಇಲ್ಲ.

ಶ್ರೀ ಸಂಪಂಗಿ ಎನ್ : ಮಾನ್ಯ ಅಧ್ಯಕ್ಷರೆ, ಅವರು ಸದನಕ್ಕೆ ಸುಳ್ಳು ಹೇಳುತ್ತಿದ್ದಾರೆ. ನಿಮಗೆ ಮುಜರಾಯಿ ಇಲಾಖೆಯವರು ಕಳುಹಿಸಿರುವ ಪತ್ರವನ್ನು ಕಳುಹಿಸಿ ಕೊಡುತ್ತೇನೆ. ಮುಜರಾಯಿ ಇಲಾಖೆಗೆ ಸಂಬಂಧಪಟ್ಟಂತೆ ಕೇಳಿರುವ ಪ್ರಶ್ನೆಗೆ 30 ದಿವಸದಲ್ಲಿ ಉತ್ತರ ಕೊಡುತ್ತೇನೆಂದು 9 ತಿಂಗಳಾದರೂ ಇವತ್ತಿನವರೆಗೆ ಕೊಟ್ಟಿಲ್ಲ. ನೀವು ಮುಂದಿನ ವಾರ ಎಂದು ಹೇಳುತ್ತೀರಿ, ಅಲ್ಲಿಗೆ ಸದನ ಮುಗಿದು ಹೋಗುತ್ತದೆ. ಅದರ ಬಗ್ಗೆ ಏನು ಎನ್ನುವುದು ನಮಗೆ ಗೊತ್ತಾಗಬೇಕಲ್ಲವೆ?

ಆ) ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು :

ಶ್ರೀ ಕೆ.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ದಿನಾಂಕ: 21/12/2009ರ 06ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 127 ಪ್ರಶ್ನೆಗಳ ಪೈಕಿ 60 ಪ್ರಶ್ನೆಗಳ ಉತ್ತರಗಳನ್ನು,

ಮತ್ತು ದಿನಾಂಕ: 14/12/2009ರ 01ನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 11 ಪ್ರಶ್ನೆಗಳ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 48 ಪ್ರಶ್ನೆಗಳ ಪೈಕಿ 42 ಪ್ರಶ್ನೆಗಳ ಉತ್ತರಗಳನ್ನು,

ಹಾಗೂ ದಿನಾಂಕ: 18/12/2009ರ 05ನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 09 ಪ್ರಶ್ನೆಗಳ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 71 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

(ಅನುಬಂಧ–1)

ಅಧ್ಯಕ್ಷರು : ಈಗ ಸಭೆಯ ಮುಂದಿಡುವ ಕಾಗದ ಪತ್ರಗಳು.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಅಧ್ಯಕ್ಷರೇ, ಉತ್ತರವನ್ನೇ ಕೊಟ್ಟಿಲ್ಲ. ಉತ್ತರ ಕೊಡದೇ ಇವರು ಹೇಗೆ ಮಂಡಿಸುತ್ತಾರೆ, ಅದನ್ನು ವಾಪಸ್ಸು ತೆಗೆದುಕೊಳ್ಳಲಿಕ್ಕೆ ಹೇಳಿ. ದಯಮಾಡಿ ಇದನ್ನು ಮಾಡಲಿಕ್ಕೆ ಅವಕಾಶ ಕೊಡಬೇಡಿ. ಉತ್ತರ ಬಂದ ಮೇಲೆ ಮಂಡಿಸಲಿಕ್ಕೆ ಅವಕಾಶ ಕೊಡಿ. ನೀವು ಟೇಬಲ್ ಮೇಲೆ ಉತ್ತರ ಇಡಿ, ಇಲ್ಲದಿದ್ದರೆ ಅದನ್ನು ವಾಪಸ್ಸು ತೆಗೆದುಕೊಳ್ಳಲಿ.

ಅಧ್ಯಕ್ಷರು : Lay ಮಾಡಿದ್ದಾರೆ. ಈಗಲೇ ಉತ್ತರವನ್ನು ತರಿಸಿ ಕೊಡುತ್ತೇವೆ.

ಶ್ರೀ ಹೆಚ್.ಡಿ.ರೇವಣ್ಣ : ದಯಮಾಡಿ ಅದಕ್ಕೆ ಅವಕಾಶ ಕೊಡಬೇಡಿ. ಉತ್ತರ ಬಂದ ಮೇಲೆ ಮಂಡಿಸಲಿಕ್ಕೆ ಅವಕಾಶ ಕೊಡಿ, ದಿನಾಂಕ: 14, 20, 21 ರ ಪ್ರಶ್ನೆಗಳಿಗೆ ಉತ್ತರಗಳೇ ಬಂದಿಲ್ಲ.

ಅಧ್ಯಕ್ಷರು : ಈಗ ಮಂಡಿಸಿದ್ದಾರೆ, ಉತ್ತರವನ್ನು ಸಹ ಈಗಲೇ ಕೊಡಿಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಉತ್ತರ ಬಂದ ಮೇಲೆ ಮಂಡಿಸಲಿಕ್ಕೆ ಹೇಳಿ.

ಅಧ್ಯಕ್ಷರು : ಈಗಲೇ ತಕ್ಷಣ ಉತ್ತರವನ್ನು ಕೊಡಿಸುತ್ತೇವೆ.

ಶ್ರೀ ಹೆಚ್.ಡಿ.ರೇವಣ್ಣ : ಟೇಬಲ್ ಮೇಲಿಡಿ, ಇಲ್ಲದಿದ್ದರೆ ಮಂಡಿಸಲಿಕ್ಕೆ ಅವಕಾಶ ಕೊಡಬೇಡಿ. ಉತ್ತರ ಇಲ್ಲದೆ 14, 15 ಮತ್ತು 20ಕ್ಕೆ ಉತ್ತರ ಕೊಡದಿದ್ದರೆ ಇದಕ್ಕೆ ಅರ್ಥ ಏನು ಸರ್? ಉತ್ತರದ ಪ್ರತಿ ಕೊಟ್ಟಿಲ್ಲ.